










**'Marking Georgetown – An idea competition for a UNESCO World Heritage Site'** ಎಂಬ ಅಂತರರಾಷ್ಟ್ರೀಯ ಸ್ಪರ್ಧೆ ಏರ್ಪಡಿಸಿತು. ಹಲವಾರು ಕಲೆ, ಸಂಸ್ಕೃತಿಯ ವಿಶಿಷ್ಟತೆಗಳಿಂದ ಕೂಡಿದ ಈ ನಗರವನ್ನು ಮತ್ತಷ್ಟು ಸುಂದರಗೊಳಿಸಲು 'ಬೀದಿ ಕಲೆ' ಅಥವಾ **Street Art** ರಚನೆಯ ವಿಚಾರ ಸಿಕ್ಕಿದ್ದು ಆ ಸ್ಪರ್ಧೆಯಲ್ಲಿ. ಅದರಂತೆ ಐವತ್ತೆರಡು ಬೀದಿಗಳಲ್ಲಿ ಆ ಬೀದಿಯ ಕತೆ ಹೇಳುವ ಕಬ್ಬಿಣದ ಸರಳುಗಳಿಂದ ಮಾಡಿದ ವ್ಯಂಗ್ಯಚಿತ್ರಗಳನ್ನು ಸ್ಥಾಪಿಸಲಾಗಿದೆ. ಕಬ್ಬಿಣದ ಸರಳುಗಳ ವ್ಯಂಗ್ಯಚಿತ್ರಗಳ ಸ್ಥಾಪನೆ ಬಹುಶಃ ವಿಶ್ವದಲ್ಲಿ ಮೊಟ್ಟಮೊದಲನೆಯದಿರಬಹುದೇನೋ.

'ಜನರ ಧ್ವನಿ' ಎಂಬ ಥೀಮ್‌ನೊಂದಿಗೆ ವ್ಯಂಗ್ಯಚಿತ್ರಕಾರ ಟಾಂಗ್ ಮುನ್ ಕಿಯಾರವರ ನಿರ್ದೇಶನದೊಂದಿಗೆ **Sculpture at work** ಎನ್ನುವ ಸ್ಥಳೀಯ ಕಂಪನಿ 2010ರಲ್ಲಿ ಕಬ್ಬಿಣದ ಸರಳುಗಳ ವ್ಯಂಗ್ಯಚಿತ್ರಗಳನ್ನು ರಚಿಸಿ ಸ್ಥಾಪಿಸಿದೆ. ಪ್ರತಿ ವ್ಯಂಗ್ಯಚಿತ್ರವು ಪಿನಾಂಗ್‌ನ ಹಾಗೂ ಆಯಾ ಬೀದಿಯ ಚರಿತ್ರೆಯನ್ನು ವಿಡಂಬನಾತ್ಮಕವಾಗಿ ತಿಳಿಸುತ್ತದೆ. ಆಯಾ ಚಿತ್ರಕ್ಕೆ ವಿವರಣೆಯೂ ಇದೆ ಹಾಗೂ ಕಬ್ಬಿಣದ ಸರಳಿನ ವ್ಯಂಗ್ಯಚಿತ್ರದಡಿಯಲ್ಲಿ ವ್ಯಂಗ್ಯಚಿತ್ರಕಾರನ ಸಹಿಯೂ ಇದೆ. ಟಾಂಗ್ ಮುನ್ ಕಿಯಾರವರ ಜೊತೆ ಮಲೇಷಿಯಾದ ವ್ಯಂಗ್ಯಚಿತ್ರಕಾರರಾದ ಬಾಬಾ ಚುವಾ, ರೆಗ್ಗೀ ಲೀ ಮತ್ತು ಲೆಫ್ಟಿಯವರ ವ್ಯಂಗ್ಯಚಿತ್ರಗಳೂ ಇವೆ.

ಮಂತ್ರಿ ರಸ್ತೆಕ್ಕೆ 'ಲವ್ ಲೇನ್' ಎಂಬ ಹೆಸರಿತ್ತಂತೆ. ಅಲ್ಲಿರುವ ಒಂದು ವ್ಯಂಗ್ಯಚಿತ್ರದಲ್ಲಿ ಗಂಡಸೊಬ್ಬ ಹಗ್ಗವೇರಿ ಮನೆಯೊಂದರ ಕಿಟಕಿ ಪ್ರವೇಶಿಸಲು ಪ್ರಯತ್ನಿಸುತ್ತಿದ್ದಾನೆ. ಅದರ ಹೆಸರು 'ನನ್ನ ಗಂಡ ಎಲ್ಲಿ?' ಅಥವಾ 'ಮೋಸ ಮಾಡುತ್ತಿರುವ ಗಂಡ'. ಅಲ್ಲಿರುವ ಟಿಪ್ಪಣಿ, 'ಸ್ಥಳೀಯರ ಹೇಳಿಕೆಯಂತೆ ಮಂತ್ರಿ ರಸ್ತೆಯಲ್ಲಿನ ಸಿರಿವಂತರು ಇಲ್ಲಿ ತಮ್ಮ ತಮ್ಮ ಪ್ರೇಯಸಿ/ಉಪಪತ್ನಿಯರನ್ನು ಹೊಂದಿದ್ದರು, ಹೀಗಾಗಿಯೇ ಇದನ್ನು ಪ್ರೇಮ ರಸ್ತೆ (ಲವ್ ಲೇನ್) ಎಂದೂ ಕರೆಯುತ್ತಿದ್ದರು' ಎಂದು ಹೇಳುತ್ತದೆ.

ಅರ್ಮೇನಿಯನ್ ರಸ್ತೆಯಲ್ಲಿನ 'ಮೆರವಣಿಗೆ' ಎಂಬ ವ್ಯಂಗ್ಯಚಿತ್ರ ಇಬ್ಬರು ವ್ಯಕ್ತಿಗಳು ಹುಲಿಯನ್ನು ಮೆರವಣಿಗೆಯಲ್ಲಿ ಕೊಂಡೊಯ್ಯುತ್ತಿದ್ದರೆ, ಪ್ರವಾಸಿಗನೊಬ್ಬನಿಗೆ ಈ ಹಿಂದೆ 1930ರ ದಶಕದಲ್ಲಿ ಹುಲಿಯನ್ನು ಕೊಂದು ಕೊಂಡೊಯ್ಯುತ್ತಿರುವುದು ನೆನಪಾಗುತ್ತಿದೆ ಹಾಗೂ ಅಲ್ಲಿನ ಟಿಪ್ಪಣಿ ಚೀನಿಯರು ಹುಲಿಯ ವರ್ಷದಲ್ಲಿ ತಮ್ಮ ದುರದೃಷ್ಟವನ್ನು ನಿವಾರಿಸಲು ಹುಲಿಯನ್ನು ಮೆರವಣಿಗೆ ಕೊಂಡೊಯ್ಯುತ್ತಾರೆ ಎಂದು ತಿಳಿಸುತ್ತದೆ. ಹುಡುಗಿಯೊಬ್ಬಳಿಗೆ ಜಡೆ ಹಾಕುವ ಚಿತ್ರ ರೋಪ್ ವಾಕ್ ರಸ್ತೆಯಲ್ಲಿದೆ. ಹಿಂದೆ ಅಲ್ಲಿ ಹಗ್ಗಗಳನ್ನು ಹೆಣೆಯಲಾಗುತ್ತಿತ್ತು ಎಂದು ಟಿಪ್ಪಣಿ ಹೇಳುತ್ತದೆ.

'ಕೌ ಅಂಡ್ ಫಿಶ್' ವ್ಯಂಗ್ಯಚಿತ್ರವು ಮಲಯ್ ರಸ್ತೆಯಲ್ಲಿ ಮೊದಲು ಕಸಾಯಿಖಾನೆ ಇದ್ದದ್ದನ್ನು ಹಾಗೂ ಮಾರಾಟ ಮಾಡಲು ಮೀನುಗಳನ್ನು ತೂಗುಹಾಕುತ್ತಿದ್ದುದನ್ನು ಹೇಳುತ್ತದೆ. ಚೀನಿ ರಸ್ತೆಯಲ್ಲಿ, ಗಾಡಿಯಲ್ಲಿ ತಿಂಡಿ ತಿನಿಸು ಮಾರುವ ವ್ಯಾಪಾರಿಗಳು ತಾವು ಬರುತ್ತಿರುವುದನ್ನು ತಿಳಿಸಲು ಬಾಣಲೆಯನ್ನು ಸೌಟಿನಿಂದ ಬಡಿದು ಮಾಡುತ್ತಿದ್ದ ಶಬ್ದವೇ 'ಟೊಕ್ ಟೊಕ್ ಮೀ' ವ್ಯಂಗ್ಯಚಿತ್ರವಾಗಿದೆ. ಈ ವ್ಯಂಗ್ಯಚಿತ್ರಗಳ ವೈಶಿಷ್ಟ್ಯತೆಯೆಂದರೆ ವ್ಯಂಗ್ಯಚಿತ್ರ ಕಲಾವಿದನ ಕುಶಲತೆ ಹಾಳೆಯ ಮೇಲೆ ಬರೆದಷ್ಟೇ ನವಿರಾಗಿವೆ. ಅಲ್ಲದೆ ಗೋಡೆ ಹಾಗೂ ಅದರಲ್ಲಿನ ಕಿಟಕಿ ಬಾಗಿಲುಗಳನ್ನು ಹಿನ್ನೆಲೆಯಾಗಿಯೇ ಬಳಸಿಕೊಳ್ಳಲಾಗಿದೆ. ಟೊಕ್ ಟೊಕ್ ಮೀ ವ್ಯಂಗ್ಯಚಿತ್ರದಲ್ಲಿ ಮನೆಯಲ್ಲಿನ ಕಿಟಕಿಯಿಂದ ಗಾಡಿಯವನಿಂದ ಆಹಾರ ಕೊಳ್ಳಲು ಬುಟ್ಟಿಯನ್ನು ಇಳಿಬಿಟ್ಟಿರುವುದನ್ನು ಕಾಣಬಹುದು.

ಗಟ್ ಲೆಬು ಚೂಲಿಯಾ ರಸ್ತೆಯಲ್ಲಿರುವ 'ಡಬಲ್ ರೋಲ್' ವ್ಯಂಗ್ಯಚಿತ್ರ 1909ರವರೆಗೂ ಅಲ್ಲಿನ ಪೊಲೀಸರೇ ಅಗ್ನಿಶಾಮಕ ದಳದವರ ಕೆಲಸ ನಿರ್ವಹಿಸುತ್ತಿದ್ದರೆಂದು ಹೇಳುತ್ತದೆಯಲ್ಲದೆ, ಆ ವ್ಯಂಗ್ಯಚಿತ್ರದಲ್ಲಿನ ಪೊಲೀಸ್ ಒಬ್ಬ ಸರ್ದಾರ್‌ಜೀ ಸಹ ಆಗಿರುವುದನ್ನು ತೋರಿಸುತ್ತದೆ. ಈ ರೀತಿಯಲ್ಲಿ ಜಾರ್ಜ್ ಟೌನ್‌ನಲ್ಲಿನ ಪ್ರತಿಯೊಂದು ವ್ಯಂಗ್ಯಚಿತ್ರವೂ ಅಲ್ಲಿನ ಕಥೆ ಹೇಳುತ್ತದೆ.

ವ್ಯಂಗ್ಯಚಿತ್ರಗಳಿಂದ ಪ್ರಾರಂಭವಾದ ಈ ಕಲೆಯ ಅನುಷ್ಠಾನ ನಂತರ ಮ್ಯೂರಲ್ ಕಲೆಗೆ ಹಾದಿಮಾಡಿಕೊಟ್ಟಿತು. ಲಿಥುವೇನಿಯಾದ ಕಲಾವಿದ ಅರ್ನೆಸ್ಟ್ ಜಚರೆವಿಕ್ ಜಾರ್ಜ್ ಟೌನ್‌ನಲ್ಲೆಲ್ಲಾ ಗೋಡೆಗಳ ಮೇಲೆ ಮ್ಯೂರಲ್ ಕಲೆಯನ್ನು ಮಾಡಿದ್ದಾರೆ. ಅವುಗಳಲ್ಲಿ ಹೆಚ್ಚು ಜನಪ್ರಿಯವಾಗಿರುವುದು 'ಸೈಕಲ್ ತುಳಿಯುತ್ತಿರುವ ಮಕ್ಕಳು'. ನಿಜವಾದ ಸೈಕಲ್ ಗೋಡೆಗೆ ಬಂಧಿಸಿ ಗೋಡೆಯ ಮೇಲೆ ಚಿತ್ರ ಬಿಡಿಸಿದ್ದಾನೆ ಕಲಾವಿದ ಅರ್ನೆಸ್ಟ್ ಜಚರೆವಿಕ್. ಪಿನಾಂಗ್‌ಗೆ ಭೇಟಿ ನೀಡುವ ಪ್ರವಾಸಿಗರೆಲ್ಲರೂ ಆ ಮಕ್ಕಳ ಸೈಕಲ್‌ನ ಕ್ಯಾರಿಯರ್ ಮೇಲೆ ಕೂತು ಫೋಟೊ ತೆಗೆಸಿಕೊಳ್ಳುತ್ತಾರೆ. ■